**OS 19/2023**

**PW-3:** ಜಯಪಾಲ್ ರಾವ್

ದಿನಾಂಕಃ **03.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ ಎಂ.ಎನ್. ವಕೀಲರಿಂದಃ**

1. ಉಯಿಲು ಬರೆದ ದಿನಾಂಕದಂದು ಶಿವಕುಮಾರ್ ಮತ್ತು ನಾಗರಾಜು ರವರು ಬಂದಿದ್ದರು. ಬೊಮ್ಮಲಿಂಗಪ್ಪ ರವರು ಬಂದಿರಲಿಲ್ಲ. ಬೇರೆ ಯಾರು ಬಂದಿದ್ದರು ಗೊತ್ತಿಲ್ಲ. ಉಯಿಲಿನ ಮಾಹಿತಿಯನ್ನು ಪಹಣಿಯನ್ನು ನೋಡಿ ಬರೆಸಿದ್ದೇನೆ. ಬೇರೆ ದಾಖಲೆ ನೋಡಿಲ್ಲ. ನನ್ನ ಎದುರಿಗೆ ಹೆಬ್ಬೆರಳಿನ ಗುರುತನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಹೆಬ್ಬೆರಳಿನ ಗುರುತಿನ ಪಕ್ಕದಲ್ಲಿರುವ ಸಹಿ ಮತ್ತು ಬರವಣಿಗೆ ನನ್ನದಲ್ಲ. ನನ್ನ ಸಮಕ್ಷಮ ದಾಖಲೆ ಬರೆದಿಲ್ಲ ಮತ್ತು ಸಾಕ್ಷಿದಾರರು ಸಹ ನನ್ನ ಸಮಕ್ಷಮ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ಬಹಳ ಜನ ಇದ್ದ ಕಾರಣ ಪತ್ರದ ಮತ್ತೊಂದು ಪುಟದಲ್ಲಿ ಸಹಿ ಮತ್ತು ಹೆಬ್ಬೆರಳಿನ ಗುರುತನ್ನು ಮಾಡಿಲ್ಲ. ಆ ದಿನ ಆವಲಪ್ಪ ಮತ್ತು ಸಾಕ್ಷಿಗಳು ಬಂದಿರುವುದಿಲ್ಲ ಮತ್ತು ನಾನು ಕೇವಲ ಪತ್ರ ತಯಾರಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪತ್ರದಲ್ಲಿ ಹೊಂದಾಣಿಕೆ ಮಾಡಿ ಬರೆದಿದ್ದು ಅದನ್ನು ಬರೆದಾಗ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಬೊಮ್ಮಲಿಂಗಪ್ಪ ರವರಿಗೆ ಸಹಾಯ ಮಾಡುವ ಸಲುವಾಗಿ ನಾನು ಪತ್ರವನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಉಯಿಲನ್ನು ಬರೆಯಲು ಆವಲಪ್ಪ ರವರು ಮಾಹಿತಿ ನೀಡಿರುತ್ತಾರೆ. ಆವಲಪ್ಪ ರವರಿಗೆ ಮಾತನಾಡಲು ಬರುತ್ತಿರಲಿಲ್ಲ ಮತ್ತು ಅವರು ಪಾವಗಡಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.